# 2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 62

# ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ಅಧಿನಿಯಮ, 2025

## ಪ್ರಕರಣಗಳ ಪಟ್ಟಿ

**ಪ್ರಕರಣಗಳು**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ನೋಂದಣಿ
4. ಸೌಲಭ್ಯಗಳ ಹಕ್ಕು
5. ಗುರುತಿನ ಚೀಟಿಗಳು
6. ಸ್ಕೀಮುಗಳನ್ನು ರೂಪಿಸುವುದು
7. ಮಾರುಕಟ್ಟೆ ಶುಲ್ಕಗಳ ವಿಧಿಸುವಿಕೆ
8. ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ಮಂಡಲಿ
9. ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ವಿರುದ್ಧದ ಅಪರಾಧಗಳು
10. ಸ್ವತ್ತಿನ ವಿರುದ್ಧದ ಅಪರಾಧಗಳು
11. ಸರ್ಕಾರಿ ನೌಕರರಿಂದ ಎಸಗಲಾಗುವ ಅಪರಾಧಗಳು
12. ಅಪರಾಧಗಳು ಸಂಜ್ಞೇಯ ಮತ್ತು ಜಾಮೀನು ರಹಿತವಾಗಿರುವುದು
13. ನಷ್ಟಪರಿಹಾರ ನೀಡುವ ಆದೇಶ
14. ನಿಯಮಗಳ ರಚನಾ ಅಧಿಕಾರ
15. ತೊಂದರೆಗಳನ್ನು ನಿವಾರಿಸುವ ಅಧಿಕಾರ
16. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2025ರ ಅಧಿನಿಯಮ ಸಂಖ್ಯೆ: 62** 2024-25ರ ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಯನ್ನು ಜಾರಿಗೊಳಿಸಲು, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ನೋಂದಣಿ ಮತ್ತು ಗುರುತಿಸುವಿಕೆಗಾಗಿ ಹಾಗೂ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಪ್ರಯೋಜನಕ್ಕಾಗಿ ಸ್ಕೀಮುಗಳನ್ನು ಅನುಷ್ಠಾನಗೊಳಿಸಲು ಕ್ಷೇಮಾಭಿವೃದ್ಧಿ ಮಂಡಲಿಯ ಮೂಲಕ ನಿರ್ವಹಿಸಬೇಕಾದ ನಿಧಿಯನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಶಾಸನವೊಂದನ್ನು ಅಧಿನಿಯಮಿತಿಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಮಂದುವರೆದು ಕ್ಷೇಮಾಭಿವೃದ್ಧಿ ನಿಧಿಗೆ ಹಣಕಾಸು ಒದಗಿಸಲು ಮಾರುಕಟ್ಟೆ ಶುಲ್ಕವನ್ನು ವಿಧಿಸುವುದು ಯುಕ್ತವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2025ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 62, ಕಡತ ಸಂಖ್ಯೆ:ಸಂವ್ಯಶಾಇ 66 ಶಾಸನ 2025]
[ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 20 ಮತ್ತು 23ನೇ ನಮೂದನೆಯಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:580, ದಿನಾಂಕ:12.09.2025ರಲ್ಲಿ ಪ್ರಕಟಗೊಂಡಿದೆ]

## 2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 62

(2025ರ ಸೆಪ್ಟೆಂಬರ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ಅಧಿನಿಯಮ, 2025

(2025 ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯದಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ಕ್ಷೇಮಾಭಿವೃದ್ಧಿ ಕ್ರಮಗಳನ್ನು ಮತ್ತು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ವಿರುದ್ಧ ದೌರ್ಜನ್ಯಗಳ ಅಪರಾಧ ಎಸಗುವುದನ್ನು ತಡೆಗಟ್ಟುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ಕ್ಷೇಮಾಭಿವೃದ್ಧಿ ಕ್ರಮಗಳನ್ನು ಮತ್ತು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ವಿರುದ್ಧ ದೌರ್ಜನ್ಯಗಳ ಅಪರಾಧ ಎಸಗುವುದನ್ನು ತಡೆಗಟ್ಟುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ಅಧಿನಿಯಮ, 2025 ಎಂದು ಕರೆಯತಕ್ಕದ್ದು;

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತೆ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಫಲಾನುಭವಿ" ಎಂದರೆ ಈ ಅಧಿನಿಯಮದ 4ನೇ ಪ್ರಕರಣದಡಿ ನೋಂದಾಯಿಸಲಾದ ಸಂಪ್ರಾದಾಯಿಕ ಅಲೆಮಾರಿ ಕುರಿಗಾಹಿ;

(ಬಿ) "ಆಯುಕ್ತ" ಎಂದರೆ ಆಯುಕ್ತ, ಪಶುಸಂಗೋಪನೆ ಮತ್ತು ಪಶುಪಾಲನಾ ಸೇವೆಗಳ ಇಲಾಖೆ, ಕರ್ನಾಟಕ ಸರ್ಕಾರ;

(ಸಿ) "ಇಲಾಖೆ" ಎಂದರೆ ಪಶುಸಂಗೋಪನೆ ಮತ್ತು ಪಶುಪಾಲನಾ ಸೇವೆಗಳ ಇಲಾಖೆ, ಕರ್ನಾಟಕ ಸರ್ಕಾರ;

(ಡಿ) "ಅಭಿವೃದ್ಧಿ ನಿಗಮ" ಎಂದರೆ ಪಶುಸಂಗೋಪನೆ ಮತ್ತು ಪಶುಪಾಲನಾ ಸೇವೆಗಳ ಇಲಾಖೆ, ಕರ್ನಾಟಕ ಸರ್ಕಾರವು ಕಂಪನಿಗಳ ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ,18)ರಡಿ ನೋಂದಾಯಿಸಲಾದ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ;

(ಇ) "ಮಾರುಕಟ್ಟೆ"ಯು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27)ರ 2ನೇ ಪ್ರಕರಣದ (18)ನೇ ಖಂಡದಡಿ ಅದಕ್ಕೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು;

(ಎಫ್) "ಮಾರಾಟ" ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27)ರ 2ನೇ ಪ್ರಕರಣದ (18ಎ)ಖಂಡದಡಿ ಅದಕ್ಕೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು

(ಜಿ) "ಮಾರುಕಟ್ಟೆ ಶುಲ್ಕಗಳು" ಎಂದರೆ ಈ ಅಧಿನಿಯಮದ 7ನೇ ಪ್ರಕರಣದಡಿ ವಿಧಿಸಲಾದ ಶುಲ್ಕ;

(ಎಚ್) "ನಿಯಮಿಸಲಾದುದು" ಎಂದರೆ ರಾಜ್ಯ ಸರ್ಕಾರವು ಈ ಅಧಿನಿಯಮದಡಿ ನಿಯಮಗಳ ಮೂಲಕ ನಿಯಮಿಸಲಾದುದು;

(ಐ) "ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿ" ಎಂದರೆ ಸಾಂಪ್ರದಾಯಿಕ ಮಾರ್ಗಗಳ ಮೂಲಕ ಮೇವು, ನೀರು ಮತ್ತು ಜೀವನಾಧಾರಕದ ಹುಡುಕಾಟದಲ್ಲಿ ಕುರಿ, ಮೇಕೆ ಅಥವಾ ಅಂಥ ಜಾನುವಾರುಗಳ ಸಾಂಪ್ರದಾಯಿಕ, ಅಲೆಮಾರಿ ಅಥವಾ ಹಂಗಾಮಿ ಸಾಕಾಣಿಕೆಯಲ್ಲಿ ಮೂಲವಾಗಿ ತೊಡಗಿಸಿಕೊಂಡ ಯಾರೇ ವ್ಯಕ್ತಿ;

(ಜೆ) "ಕ್ಷೇಮಾಭಿವೃದ್ಧಿ ಮಂಡಳಿ" ಎಂದರೆ ಈ ಅಧಿನಿಯಮದಡಿ ಸ್ಥಾಪಿಸಿದ ನಿಧಿಯನ್ನು ನಿರ್ವಹಿಸಲು 8ನೇ ಪ್ರಕರಣದಡಿ ರಚಿಸಲಾದ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ಮಂಡಳಿ;

**3. ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ನೋಂದಣಿ.-**(1) ಈ ಅಧಿನಿಯಮದಡಿ ಪ್ರತಿಯೊಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯು ಫಲಾನುಭವಿಯಾಗಿ ನೋಂದಾಯಿಸಲು ಅರ್ಹನಾಗಿರತಕ್ಕದ್ದು.

(2) ಈ ಕುರಿತು ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) ಉಪ-ಪ್ರಕರಣ (2)ರಡಿ ಮಾಡಲಾದ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದಂಥ ದಸ್ತಾವೇಜುಗಳೊಂದಿಗೆ ಲಗತ್ತಾಗಿರತಕ್ಕದ್ದು.

(4) ಉಪ-ಪ್ರಕರಣ (2)ರಡಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು, ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳ ಮೇರೆಗೆ ಅರ್ಜಿದಾರನು ಅರ್ಹನೆಂದು ಮನಗಂಡರೆ, ಆತನು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಹೆಸರನ್ನು ಈ ಅಧಿನಿಯಮದಡಿ ಫಲಾನುಭವಿ ಎಂಬುದಾಗಿ ನೊಂದಾಯಿಸತಕ್ಕದ್ದು:

ಪರಂತು ಅರ್ಜಿದಾರನಿಗೆ ಆತನ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ಹೊರತು ನೋಂದಣಿಗಾಗಿನ ಯಾವುದೇ ಅರ್ಜಿಯನ್ನು ಅಧಿಕಾರಿಯು ತಿರಸ್ಕರಿಸತಕ್ಕದ್ದಲ್ಲ.

(5) ಉಪ-ಪ್ರಕರಣ (4)ರಡಿಯಲ್ಲಿನ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಂಥ ತೀರ್ಮಾನದ ದಿನಾಂಕದಿಂದ ಮೂವತ್ತು ದಿನದೊಳಗಾಗಿ ಪಶುಸಂಗೋಪನೆ ಮತ್ತು ಪಶುಪಾಲನಾ ಸೇವೆಗಳ ಇಲಾಖೆಯ ಆಯುಕ್ತ ಅಥವಾ ಈ ಕುರಿತು ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾರೇ ಇತರ ಅಧಿಕಾರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು ಮತ್ತು ಅಂಥ ಮೇಲ್ಮನವಿಯ ಮೇಲೆ ಆಯುಕ್ತ ಅಥವಾ ಇತರ ಅಧಿಕೃತಗೊಳಿಸಿದ ಅಧಿಕಾರಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು ಆಯುಕ್ತ ಅಥವಾ ಈ ಕುರಿತು ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾರೇ ಇತರ ಅಧಿಕಾರಿಯು, ಸಕಾಲಿಕವಾಗಿ ಮೇಲ್ಮನವಿ ಸಲ್ಲಿಸುವುದನ್ನು ತಡೆಯಲು ಅರ್ಜಿದಾರನಿಗೆ ಸಾಕಷ್ಟು ಕಾರಣಗಳಿವೆ ಎಂದು ಮನಗಂಡರೆ, ಆತನು ಮೂವತ್ತು ದಿನಗಳ ಸದರಿ ಅವಧಿಯು ಮುಕ್ತಾಯಗೊಂಡ ತರುವಾಯವೂ ಮೇಲ್ಮನವಿಯನ್ನು ಪುರಸ್ಕರಿಸಬಹುದು.

(6) ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆಯ ಆಯುಕ್ತನು ನಿಯಮಿಸಬಹುದಾದಂಥ ರಿಜಿಸ್ಟರ್‌ಗಳನ್ನು ನಿರ್ವಹಿಸಲು ಅಧಿಕಾರಿಯನ್ನು ಅಧಿಕೃತಗೊಳಿಸತಕ್ಕದ್ದು.

**4. ಸೌಲಭ್ಯಗಳ ಹಕ್ಕು.-** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದಡಿಯಲ್ಲಿ ಫಲಾನುಭವಿಯಾಗಿ ನೋಂದಾಯಿಸಲಾದ ಪ್ರತಿಯೊಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯು ಈ ಅಧಿನಿಯಮದಡಿ ಉಪಬಂಧಿಸಲಾದ ಪ್ರಯೋಜನಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

**5. ಗುರುತಿನ ಚೀಟಿಗಳು.-** (1) ಸರ್ಕಾರವು ಪ್ರತಿಯೊಬ್ಬ ಫಲಾನುಭವಿಗೆ ಗುರುತಿನ ಚೀಟಿಯ ಮೇಲೆ ಯುಕ್ತವಾಗಿ ಅವರ ಛಾಯಾಚಿತ್ರ ಅಂಟಿಸುವುದರೊಂದಿಗೆ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಅವರ ಅವಲಂಬಿತರು ಮತ್ತು ಜಾನುವಾರುಗಳ ವಿವರಗಳನ್ನು ನಮೂದಿಸಲು ಸಾಕಷ್ಟು ಸ್ಥಳದೊಂದಿಗೆ ಗುರುತಿನ ಚೀಟಿಯನ್ನು ಒದಗಿಸುವುದಕ್ಕಾಗಿ ಜವಾಬ್ದಾರಿಯುತ ಸಕ್ಷಮ ಪ್ರಾಧಿಕಾರಿಯನ್ನು ಅಧಿಸೂಚಿಸತಕ್ಕದ್ದು.

(2) ಈ ಅಧಿನಿಯಮದಡಿ ಗುರುತಿನ ಚೀಟಿಯನ್ನು ಪಡೆದ ಫಲಾನುಭವಿಯು ಸರ್ಕಾರದ ಯಾರೇ ಅಧಿಕಾರಿಯು ಅಗತ್ಯಪಡಿಸಿದಾಗಲೆಲ್ಲಾ ಅದನ್ನು ಹಾಜರುಪಡಿಸತಕ್ಕದ್ದು.

(3) ಈ ಅಧಿನಿಯಮದಡಿ ಯಾರೇ ಫಲಾನುಭವಿಗೆ ನೀಡಲಾದ ಗುರುತಿನ ಚೀಟಿಯು ನಿಯಮಿಸಲಾದಂಥ ಕಾಲಾವಧಿಗಾಗಿ ಸಿಂಧುವಾಗಿರತಕ್ಕದ್ದು.

(4) ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಕಾಗದಪತ್ರ ಮತ್ತು ವಿದ್ಯುನ್ಮಾನ ದಾಖಲೆಗಳನ್ನು 3ನೇ ಪ್ರಕರಣದ (6)ನೇ ಉಪಪ್ರಕರಣದಡಿ ಅಧಿಕೃತಗೊಳಿಸಲಾದ ಅಧಿಕಾರಿಯು ನಿರ್ವಹಿಸತಕ್ಕದ್ದು.

**6. ಸ್ಕೀಮುಗಳನ್ನು ರೂಪಿಸುವುದು.-** (1) ರಾಜ್ಯ ಸರ್ಕಾರವು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ಕ್ಷೇಮಾಭಿವೃದ್ಧಿ ಸ್ಕೀಮುಗಳನ್ನು ಕಾಲಕಾಲಕ್ಕೆ ರೂಪಿಸತಕ್ಕದ್ದು ಮತ್ತು ಅಧಿಸೂಚಿಸತಕ್ಕದ್ದು,-

(i) ಕೈಗೆಟಕುವ ಬೆಲೆಯ ವಸತಿ ಮತ್ತು ವಸತಿಯ ಉದ್ದೇಶಗಳಿಗಾಗಿ ಭೂಮಿಯ ಮಂಜೂರಾತಿ;

(ii) ಜೀವ ವಿಮೆ, ಆರೋಗ್ಯ ವಿಮೆ, ಪಶು ವಿಮೆ ಮತ್ತು ವಿಕಲತೆಯ ವ್ಯಾಪ್ತಿ;

(iii) ಆರೋಗ್ಯ ಸೌಲಭ್ಯಗಳು;

(iv) ಶೈಕ್ಷಣಿಕ ಸೌಲಭ್ಯಗಳು;

(v) ಕೌಶಲ್ಯ ಉನ್ನತೀಕರಣ;

(vi) ಆಹಾರ ಭದ್ರತೆ;

(vii) ಜಾನುವಾರುಗಳಿಗೆ ಲಸಿಕೆ ಮತ್ತು ಚಿಕಿತ್ಸೆ;

(viii) ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಉತ್ಪನ್ನಗಳಿಗಾಗಿ ಮಾರಾಟ ಬೆಂಬಲ;

(ix) ಜಾನುವಾರು ನಷ್ಟದ ಸಂದರ್ಭದಲ್ಲಿ ಹಣಕಾಸು ನಷ್ಟಪರಿಹಾರ; ಮತ್ತು

(x) ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ಯಾವುದೇ ಇತರ ಪ್ರಯೋಜನಗಳು.

(2) ಈ ಪ್ರಕರಣದಡಿ ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾವುದೇ ಸ್ಕೀಮಿಗೆ,-

(ಎ) ರಾಜ್ಯ ಸರ್ಕಾರವು ಪೂರ್ಣ ಧನಸಹಾಯ ಮಾಡಬಹುದು; ಅಥವಾ

(ಬಿ) ರಾಜ್ಯ ಸರ್ಕಾರವು ಭಾಗಶಃ ಧನಸಹಾಯ ಮಾಡಬಹುದು; ಅಥವಾ

(ಸಿ) ರಾಜ್ಯಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಸ್ಕೀಮಿನಲ್ಲಿ ಸ್ಕೀಮಿನ ಫಲಾನುಭವಿಗಳಿಂದ ಸಂಗ್ರಹಿಸುವ ವಂತಿಗೆಗಳ ಮುಖಾಂತರ ಭಾಗಶಃ ಧನಸಹಾಯ ಪಡೆಯಬಹುದು; ಅಥವಾ

(ಡಿ) ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನಿಧಿ ಅಥವಾ ಸ್ಕೀಮಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಮೂಲವನ್ನು ಒಳಗೊಂಡಂತೆ ಯಾವುದೇ ಮೂಲದಿಂದ ಧನಸಹಾಯ ಪಡೆಯಬಹುದು;

(3) ರಾಜ್ಯ ಸರ್ಕಾರವು ತಾನು ರೂಪಿಸಿದ ಸ್ಕೀಮುಗಳಿಗಾಗಿ ಕೇಂದ್ರ ಸರ್ಕಾರದಿಂದ ಹಣಕಾಸಿನ ನೆರವನ್ನು ಕೋರಬಹುದು.

**7. ಮಾರುಕಟ್ಟೆ ಶುಲ್ಕಗಳ ವಿಧಿಸುವಿಕೆ.-** (1) ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಧಿಕೃತ ಮಾರುಕಟ್ಟೆಯಿಂದ ಕುರಿ ಅಥವಾ ಮೇಕೆಯನ್ನು ಖರೀದಿಸಿದ ಯಾರೇ ವ್ಯಕ್ತಿಯು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27)ರಡಿ ವಿಧಿಸಲಾದ ಮಾರುಕಟ್ಟೆ ಶುಲ್ಕವನ್ನು ಮಾರುಕಟ್ಟೆ ಸಮಿತಿಗೆ ಪಾವತಿಸತಕ್ಕದ್ದು.

(2) ಯಾರೇ ವ್ಯಕ್ತಿಯು ಈ ಪ್ರಕರಣದಡಿ ಪಾವತಿಸಬೇಕಾದ ಮಾರುಕಟ್ಟೆ ಶುಲ್ಕವನ್ನು ಪಾವತಿಸಲು ತಪ್ಪಿದರೆ, ಮಾರುಕಟ್ಟೆ ಸಮಿತಿಯು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27)ರಡಿ ದಂಡವನ್ನು ವಿಧಿಸುವ ಅಧಿಕಾರ ಹೊಂದಿರತಕ್ಕದ್ದು.

(3) ಉಪಪ್ರಕರಣ (1)ರಡಿ ಸಂಗ್ರಹಿಸಲಾದ ಮಾರುಕಟ್ಟೆ ಶುಲ್ಕವನ್ನು, 8ನೇ ಪ್ರಕರಣದ (1)ನೇ ಉಪಪ್ರಕರಣದಡಿ ಸ್ಥಾಪಿಸಲಾದ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿ ಕ್ಷೇಮಾಭಿವೃದ್ಧಿ ನಿಧಿಗೆ ನಿಯಮಿಸಬಹುದಾದಂಥ ವಿಧಾನದಲ್ಲಿ ಜಮೆ ಮಾಡತಕ್ಕದ್ದು.

**8. ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ಮಂಡಲಿ.-** (1) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದಡಿ ನಿಯಮಿಸಬಹುದಾದಂಥ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳಲೆಂದು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಧಿಯೆಂದು ಕರೆಯಲಾಗುವ ನಿಧಿಯನ್ನು ರಚಿಸತಕ್ಕದ್ದು.

(2) ರಾಜ್ಯ ಸರ್ಕಾರವು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ನಿಧಿಯನ್ನು ನಿರ್ವಹಿಸಲು ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ಮಂಡಲಿ ಎಂದು ಕರೆಯಲಾಗುವ ಮಂಡಲಿಯನ್ನು ರಚಿಸಬಹುದು ಮತ್ತು ಅಧಿಸೂಚಿಸಬಹುದು.

(3) ಕ್ಷೇಮಾಭಿವೃದ್ಧಿ ಮಂಡಲಿಯು ಅಧ್ಯಕ್ಷರು ಮತ್ತು ಅಭಿವೃದ್ಧಿ ನಿಗಮದಿಂದ ನಿಯಮಿಸಬಹುದಾದಂಥ ಇತರ ಅಧಿಕಾರಿಗಳನ್ನು ರಾಜ್ಯ ಸರ್ಕಾರವು ಈ ಕುರಿತು ಅಧಿಸೂಚನೆಯ ಮೂಲಕ ಗೊತ್ತುಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಒಳಗೊಂಡಿರತಕ್ಕದ್ದು.

(4) ಮಂಡಲಿಯು, ಈ ಅಧಿನಿಯಮದಡಿಯಲ್ಲಿ ಅಥವಾ ಈ ಅಧಿನಿಯಮದಡಿ ರಚಿಸಲಾದ ಯಾವುದೇ ಇತರ ನಿಯಮಗಳಡಿ ವಿಧಿಸಿದಂಥ ನಿರ್ಬಂಧಗಳಿಗೆ ಒಳಪಟ್ಟು, ಶಾಶ್ವತ ಉತ್ತರಾಧಿಕಾರ ಹಾಗೂ ಸಾಮಾನ್ಯ ಮೊಹರನ್ನು ಹೊಂದಿರುವ, ಅದನ್ನು ರಚಿಸಿದ ಉದ್ದೇಶಕ್ಕಾಗಿ ಸೂಕ್ತ ಅಥವಾ ಯುಕ್ತವಾದ ಎಲ್ಲಾ ಅವಶ್ಯಕ ವಿಷಯಗಳನ್ನು ಮಾಡುವ ಹಾಗೂ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಹಾಗೂ ದಾವೆಗೆ ಗುರಿಯಾಗತಕ್ಕದ್ದು.

(5) ಕ್ಷೇಮಾಭಿವೃದ್ಧಿ ಮಂಡಲಿಯಿಂದ ವಹಿಸಲಾದ ಎಲ್ಲಾ ವೆಚ್ಚಗಳನ್ನು ಸದರಿ ನಿಧಿಯಿಂದ ಖರ್ಚುಮಾಡತಕ್ಕದ್ದು.

(6) ನಿಧಿಯನ್ನು, ಈ ಅಧಿನಿಯಮದ 6ನೇ ಪ್ರಕರಣದಡಿ ರಾಜ್ಯ ಸರ್ಕಾರವು ಅಧಿಸೂಚಿಸಿದ ಸ್ಕೀಮುಗಳ ಅನುಷ್ಠಾನಕ್ಕಾಗಿ ಮತ್ತು ನಿಯಮಿಸಬಹುದಾದ ಯಾವುದೇ ಇತರೆ ಉದ್ದೇಶಕ್ಕಾಗಿಯೂ ಸಹ ಬಳಸಿಕೊಳ್ಳಬಹುದು.

**9. ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ವಿರುದ್ಧದ ಅಪರಾಧಗಳು.-** ಯಾರೇ ವ್ಯಕ್ತಿಯು,-

(i) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯು ಯಾವುದೇ ಕಾನೂನಾತ್ಮಕ ಆಧಾರವಿಲ್ಲದೇ ಯಾವುದೇ ಸಾರ್ವಜನಿಕ ಸ್ವತ್ತು, ಸರ್ಕಾರಿ ಭೂಮಿ ಅಥವಾ ಅರಣ್ಯ ಭೂಮಿಗೆ (ಮೀಸಲು ಅರಣ್ಯವನ್ನು ಹೊರತುಪಡಿಸಿ) ಪ್ರವೇಶಿಸುವುದನ್ನು ನಿರಾಕರಿಸಿದಲ್ಲಿ, ಅಂಥ ವ್ಯಕ್ತಿಯು ಒಂದು ವರ್ಷದ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(ii) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯು ಯಾವುದೇ ಸಾರ್ವಜನಿಕ ಮಾರ್ಗಕ್ಕಿರುವ ಪ್ರವೇಶದ ರೂಢಿಜನ್ಯ ಹಕ್ಕು ಅಥವಾ ಮೇಯಿಸುವ ರೂಢಿ ಜನ್ಯ ಹಕ್ಕನ್ನು ನಿರಾಕರಿಸುವ ಅಥವಾ ಇತರ ಸಾರ್ವಜನಿಕರಿಗೆ ಬಳಸಲು ಅಥವಾ ಪ್ರವೇಶಿಸಲು ಹಕ್ಕಿರುವಂಥ ಸಾರ್ವಜನಿಕ ಮಾರ್ಗದ ಸ್ಥಳವನ್ನು ಬಳಸುವಲ್ಲಿ ಅಥವಾ ಪ್ರವೇಶಿಸುವಲ್ಲಿ ಅವರನ್ನು ತಡೆಯುವುದಕ್ಕಾಗಿ ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ದಾರಿಗೆ ಅಡ್ಡಿಯನ್ನುಂಟು ಮಾಡುವ, ಅಂಥ ವ್ಯಕ್ತಿಯು ಎರಡು ವರ್ಷಗಳ ಅವಧಿಯ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(iii) ಯಾರೇ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯನ್ನು ಉದ್ದೇಶಪೂರ್ವಕವಾಗಿ ಅವಮಾನಿಸಿದಲ್ಲಿ ಅಥವಾ ಮೌಖಿಕವಾಗಿ ನಿಂದಿಸಿದಲ್ಲಿ ಅಂಥ ವ್ಯಕ್ತಿಯು ಆರು ತಿಂಗಳ ಅವಧಿಯ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(iv) ಮರಣವನ್ನುಂಟುಮಾಡುವ ಉದ್ದೇಶದಿಂದ ಅಥವಾ ಮರಣವನ್ನುಂಟು ಮಾಡುವಂಥ ದೈಹಿಕವಾಗಿ ಗಾಯಗೊಳಿಸುವ ಉದ್ದೇಶದಿಂದ, ಅಥವಾ ಅಂಥ ಕೃತ್ಯದಿಂದ ಮರಣವುಂಟಾಗಬಹುದು ಎಂಬ ತಿಳುವಳಿಕೆಯಿಂದ ಅಂಥ ಕೃತ್ಯವನ್ನೆಸಗುವ ಮೂಲಕ ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಮರಣಕ್ಕೆ ಕಾರಣನಾಗುವ ಅಂಥ ವ್ಯಕ್ತಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಸಂಬಂಧಪಟ್ಟ ಕ್ರಿಮಿನಲ್ ಕಾನೂನುಗಳಡಿಯಲ್ಲಿ ದಂಡಿತನಾಗತಕ್ಕದ್ದು.

(v) ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45)ರ 75ನೇ ಪ್ರಕರಣದಡಿಯಲ್ಲಿ ಲೈಂಗಿಕ ಕಿರುಕುಳದ ರೀತಿಯಲ್ಲಿ ವರ್ತಿಸುವ ಅಂಥ ವ್ಯಕ್ತಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಸಂಬಂಧಪಟ್ಟ ಕ್ರಿಮಿನಲ್ ಕಾನೂನುಗಳ ಉಪಬಂಧಗಳನುಸಾರ ದಂಡಿತನಾಗತಕ್ಕದ್ದು

(vi) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ವಿರುದ್ಧದ ಅಪರಾಧಗಳು ಹಾಗೂ ಸ್ವತ್ತಿನ ವಿರುದ್ಧದ ಅಪರಾಧಗಳು ಅಥವಾ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿನ ಯಾವುದೇ ಇತರ ಅಪರಾಧಕ್ಕೆ ಸಂಬಂಧಿಸಿದಂತೆ ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯನ್ನು ನ್ಯಾಯಿಕ ನೆರವನ್ನು (Judicial Recourse) ಪಡೆದುಕೊಳ್ಳುವುದರಿಂದ ತಡೆಯುವ ಅಂಥ ವ್ಯಕ್ತಿಯು ಎರಡು ವರ್ಷಗಳ ಅವಧಿಯ ಕಾರವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(vii) ಕಾನೂನಿನ ವಿದ್ಯುಕ್ತ ಕ್ರಮವನ್ನು ಉಲ್ಲಂಘಿಸುವ ಮತ್ತು ಸೂಕ್ತ ಪ್ರಾಧಿಕಾರದ ಗಮನಕ್ಕೆ ತರದೆಯೇ ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯಿಂದ ಹಾನಿಗಳನ್ನು ಕ್ಲೇಮು ಮಾಡುವ ಅಂಥ ವ್ಯಕ್ತಿಯು ಮೂರು ವರ್ಷಗಳ ಅವಧಿಯ ಕಾರವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**10. ಸ್ವತ್ತಿನ ವಿರುದ್ಧದ ಅಪರಾಧಗಳು,-** (1) ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯಲ್ಲದ,-

(i) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗೆ ಸೇರಿದ ಚರ ಅಥವಾ ಅನ್ಯಥಾ ಸ್ವತ್ತಿಗೆ ಹಾನಿಯನ್ನುಂಟು ಮಾಡುವ ಯಾರೇ ವ್ಯಕ್ತಿಯು; ಅಥವಾ

(ii) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗೆ ಸೇರಿದ ಸ್ವತ್ತನ್ನು ಅವರ ಸಮ್ಮತಿಯಿಲ್ಲದೆ ಸ್ಥಳಾಂತರಿಸುವ ಯಾರೇ ವ್ಯಕ್ತಿಯು; ಅಥವಾ

(iii) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಸ್ವತ್ತಿನ ವಿರುದ್ಧ ಅಪರಾಧ ಎಸಗಿರುವನೆಂದು ಹೇಳಲಾದ, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯಿಂದ ಅವರ ಸ್ವತ್ತನ್ನು ಕಸಿದುಕೊಳ್ಳುವ ಯಾರೇ ವ್ಯಕ್ತಿಯು,

- ಎರಡು ವರ್ಷಗಳ ಅವಧಿಯ ಕಾರಾವಾಸದಿಂದ ಮತ್ತು ಹಾನಿಗೊಳಗಾದ ಸ್ವತ್ತಿನ ಮೌಲ್ಯಕ್ಕೆ ವಿಧಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯಲ್ಲದ ಯಾರೇ ವ್ಯಕ್ತಿಯು,-

(i) ಯಾರೇ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಸ್ವಾಧೀನದಿಂದ ಯಾವುದೇ ಜಾನುವಾರನ್ನು ಆ ವ್ಯಕ್ತಿಯ ಒಪ್ಪಿಗೆಯಿಲ್ಲದೆ ಅಪ್ರಮಾಣಿಕವಾಗಿ ಪಡೆದುಕೊಳ್ಳಲು ಉದ್ದೇಶಿಸುವ ಅಂಥ ಪಡೆದುಕೊಳ್ಳುವಿಕೆಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಆ ಜಾನುವಾರನ್ನು ಸಾಗಿಸುವ, ಅದನ್ನು ದೂರಸಾಗಿಸುವ ಅಥವಾ ಅದನ್ನು ದುರುಪಯೋಗಿಸಿಕೊಳ್ಳುವ; ಅಥವಾ

(ii) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಜಾನುವಾರನ್ನು ಯಾವುದೇ ಸಾರ್ವಜನಿಕ ಸ್ವತ್ತು, ಸರ್ಕಾರಿ ಭೂಮಿ ಅಥವಾ ಅರಣ್ಯ ಭೂಮಿ(ಮೀಸಲು ಅರಣ್ಯವನ್ನು ಹೊರತುಪಡಿಸಿ)ಯನ್ನು ಪ್ರವೇಶಿಸುವುದನ್ನು ನಿರಾಕರಿಸಲು ಉದ್ದೇಶಿಸುವ, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಜಾನುವಾರಿಗೆ ಯಾವುದೇ ಹಾನಿಯನ್ನುಂಟುಮಾಡುವ, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಸ್ವತ್ತಿನ ವಿರುದ್ಧ ಅಪರಾಧವನ್ನು ಎಸಗಿದ್ದಾನೆಂದು ಹೇಳಲಾಗುವ ಯಾರೇ ವ್ಯಕ್ತಿಯು,

- ಎರಡು ವರ್ಷಗಳ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**11. ಸರ್ಕಾರಿ ನೌಕರರಿಂದ ಎಸಗಲಾಗುವ ಅಪರಾಧಗಳು.-** ಸರ್ಕಾರಿ ನೌಕರನಾಗಿದ್ದುಕೊಂಡು, ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗೆ ಹಾನಿ ಅಥವಾ ಆರ್ಥಿಕ ನಷ್ಟವನ್ನುಂಟುಮಾಡುವ ಉದ್ದೇಶದಿಂದ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ ಆತನು ನಿರ್ವಹಿಸಬೇಕೆಂದು ಅಗತ್ಯಪಡಿಸಿರುವ ಆತನ ಕರ್ತವ್ಯಗಳನ್ನು ಇಚ್ಛಾಪೂರ್ವಕವಾಗಿ ನಿರ್ಲಕ್ಷಿಸುವ ಯಾರೇ ವ್ಯಕ್ತಿಯು ಸಂಬಂಧಪಟ್ಟ ಸಿವಿಲ್ ಸೇವಾ ನಿಯಮಗಳಡಿ ದಂಡಿತನಾಗತಕ್ಕದ್ದು:

ಪರಂತು, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರ ಅನುಸಾರ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಂದ ಬಂದಿರುವ ದೂರುಗಳ ಮೇಲೆ ಕ್ರಮ ವಹಿಸಲು ಅಥವಾ ತನಿಖೆಯನ್ನು ಕೈಗೊಳ್ಳಲು ಇಚ್ಛಾಪೂರ್ವಕವಾಗಿ ನಿರಾಕರಿಸುವ ಯಾವುದೆ ಪೊಲೀಸ್ ಅಧಿಕಾರಿಯು ಈ ಪ್ರಕರಣದ ಉದ್ದೇಶಗಳಿಗಾಗಿ ಅಪರಾಧ ಎಸಗಿರುವನೆಂದು ಹೇಳತಕ್ಕದ್ದು.

**12. ಅಪರಾಧಗಳು ಸಂಜ್ಞೇಯ ಮತ್ತು ಜಾಮೀನು ರಹಿತವಾಗಿರುವುದು**:- ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿನ ಒಂದು ಅಪರಾಧಕ್ಕೆ ಆರೋಪಿತನಾದ ಯಾರೇ ವ್ಯಕ್ತಿಯು ಈ ಮುಂದಿನವುಗಳ ಹೊರತಾಗಿ ಜಾಮೀನಿನ ಮೇಲೆ ಅಥವಾ ಅವರ ಸ್ವಯಂ ಬಂಧಪತ್ರದ (Own bond) ಮೇಲೆ ಬಿಡುಗಡೆಯಾಗತಕ್ಕದ್ದಲ್ಲ,-

(i) ಅಂಥ ಬಿಡುಗಡೆಗಾಗಿ ಸಲ್ಲಿಸಿದ ಅರ್ಜಿಗೆ ವಿರೋಧ ವ್ಯಕ್ತಪಡಿಸಲು ಸರ್ಕಾರಿ ಅಭಿಯೋಜಕನಿಗೆ ಅವಕಾಶ ನೀಡಿದ ಹೊರತು; ಮತ್ತು

(ii) ಸರ್ಕಾರಿ ಅಭಿಯೋಜಕನು ಅಂಥ ಅರ್ಜಿಗೆ ವಿರೋಧ ವ್ಯಕ್ತಪಡಿಸಿದ ಸಂದರ್ಭದಲ್ಲಿ, ನ್ಯಾಯಾಲಯವು ಅಂಥ ಅಪರಾಧಕ್ಕೆ ಆತನು ದೋಷಿಯಲ್ಲವೆಂದು ನಂಬುವಲ್ಲಿ ಸಮರ್ಪಕ ಕಾರಣಗಳಿವೆಯೆಂದು ಮತ್ತು ಅಂಥವನು ಜಾಮೀನಿನ ಮೇಲೆ ಇರುವ ಅವಧಿಯಲ್ಲಿ ಯಾವುದೇ ಅಪರಾಧವನ್ನು ಮಾಡುವ ಸಂಭವವಿಲ್ಲವೆಂದು ಮನಗಂಡ ಹೊರತು:

ಪರಂತು ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನವನನ್ನು, ಅಥವಾ ಒಬ್ಬ ಮಹಿಳೆಯನ್ನು ಅಥವಾ ಅನಾರೋಗ್ಯ ಪೀಡಿತನನ್ನು ಅಥವಾ ಅಸ್ವಸ್ಥನನ್ನು ನ್ಯಾಯಾಲಯವು ಹಾಗೆ ನಿರ್ಧರಿಸಿದರೆ, ಜಾಮೀನಿನ ಮೇಲೆ ಬಿಡುಗಡೆಗೊಳಿಸಬಹುದು:

ಮತ್ತು ಪರಂತು ಈ ಪ್ರಕರಣವು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿ ವ್ಯಕ್ತಿಗಳಿಗೆ ಅನ್ವಯವಾಗತಕ್ಕದ್ದಲ್ಲ.

**13. ನಷ್ಟಪರಿಹಾರ ನೀಡುವ ಆದೇಶ:-** ನ್ಯಾಯಾಲಯವು ಶಿಕ್ಷೆಯನ್ನು ವಿಧಿಸಿದಾಗ, ಆ ನ್ಯಾಯಾಲಯದಲ್ಲಿ ತೀರ್ಪು ಪ್ರಕಟಿಸುವ ಸಂದರ್ಭದಲ್ಲಿ ವಸೂಲಾದ ಜುಲ್ಮಾನೆಯ ಪೂರ್ಣ ಅಥವಾ ಯಾವುದೇ ಭಾಗವು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ಪರಿಹಾರ ನೀಡಲು ಅನ್ವಯವಾಗುವಂತೆ ಆದೇಶಿಸತಕ್ಕದ್ದು.

**14. ನಿಯಮಗಳ ರಚನಾ ಅಧಿಕಾರ:-** (1) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲಿನ ಅಧಿಕಾರದ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳನ್ನು ಈ ಕೆಳಗಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:-

(i) ಅಧಿನಿಯಮದ 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ನೋಂದಣಿಗಾಗಿ ಅರ್ಜಿಗಳು.

(ii) ಅಧಿನಿಯಮದ 3ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿ ಅರ್ಜಿಗಳ ಜೊತೆಯಿರಿಸುವ ದಸ್ತಾವೇಜುಗಳು.

(iii) ಅಧಿನಿಯಮದ 3ನೇ ಪ್ರಕರಣದ (6)ನೇ ಉಪ-ಪ್ರಕರಣದ ಅಡಿಯಲ್ಲಿ ಅಧಿಕೃತಗೊಳಿಸಲಾದ ವ್ಯಕ್ತಿಯು ನಿರ್ವಹಿಸಬೇಕಾದ ರಿಜಿಸ್ಟರ್‌ಗಳು.

(iv) ಅಧಿನಿಯಮದ 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಗುರುತಿನ ಚೀಟಿಗಳನ್ನು ನೀಡುವುದು.

(v) ಅಧಿನಿಯಮದ 5ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿನ ಗುರುತಿನ ಚೀಟಿಗಳ ಸಿಂಧುತ್ವ.

(vi) ಅಧಿನಿಯಮದ 7ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿ ಮಾರುಕಟ್ಟೆ ಶುಲ್ಕದ ಸಂಗ್ರಹಣೆ.

(vii) ಅಧಿನಿಯಮದ 8ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕಲ್ಯಾಣ ನಿಧಿಯ ಸ್ಥಾಪನೆ.

(viii) ಅಧಿನಿಯಮದ 8ನೇ ಪ್ರಕರಣದ (2) ಮತ್ತು (3)ನೇ ಉಪ-ಪ್ರಕರಣಗಳ ಅಡಿಯಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕಲ್ಯಾಣ ಮಂಡಳಿಯ ಸಂರಚಿಸುವುದು ಮತ್ತು ಅಧಿಸೂಚಿಸುವುದು.

(ix) ಅಧಿನಿಯಮದ 8ನೇ ಪ್ರಕರಣದ (6)ನೇ ಉಪ-ಪ್ರಕರಣದ ಅಡಿಯಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕಲ್ಯಾಣನಿಧಿಯ ಬಳಕೆ ಮತ್ತು ಉದ್ದೇಶಗಳು.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೆ ಬಾಧಕವಾಗತಕ್ಕದ್ದಲ್ಲ.

**15. ತೊಂದರೆಗಳನ್ನು ನಿವಾರಿಸುವ ಅಧಿಕಾರ**.- (1) ಈ ಅಧಿನಿಯಮದ ಉಪಬಂಧಗಳಿಗೆ ಪರಿಣಾಮ ನೀಡುವಲ್ಲಿ ಏನಾದರೂ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲ ಸದನಗಳ ಮುಂದೆ ಮಂಡಿಸತಕ್ಕದ್ದು.

**16. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮಗಳಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ರಾಜ್ಯ ಸರ್ಕಾರದ ಯಾರೇ ಅಧಿಕಾರಿ ಅಥವಾ ಇತರ ನೌಕರರ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**

ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.